# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 999 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 19/12/2018 |
| 4) | ಉತ್ತರಿಸುವವರು | ಮಾನ್ಯ ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

*****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅನುದಾನಿತ ಐಟಿಐ ಕಾಲೇಜುಗಳ ನೌಕರರುಗಳಿಗೆ ಥಾಮಸ್ ವರದಿಯನ್ವಯ 1997ರ ಅನುದಾನ ಸಂಹಿತೆಯನ್ನು ಪರಿಷ್ಕರಿಸಲಾಗಿದೆಯೇ: (ವಿವರ ನೀಡುವುದು) | 1997ರ ಅನುದಾನಿತ ಸಂಹಿತೆಯನ್ನು ಪರಿಷ್ಕರಿಸಲು ಕ್ರಮವಹಿಸಲಾಗುತ್ತಿದೆ. |
| ಆ) | ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ: ಸದರಿ ಸೌಲಭ್ಯಗಳನ್ನು ಈ ನೌಕರರಿಗೆ ನೀಡಲಾಗಿದೆಯೇ: ನೀಡಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು: (ಸಂಪೂರ್ಣ ವಿವರ ನೀಡುವುದು) | ಮೂಲವೇತನ, ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ವಾರ್ಷಿಕ ವೇತನ ಬಡ್ತಿ, ಗಳಿಕೆ ರಜೆ ನಗಧೀಕರಣ, ಗಳಿಕೆ ರಜೆ ನಗಧೀಕರಣ(ನಿವೃತ್ತಿ ನಂತರ), 10 ವರ್ಷಗಳ ಕಾಲಬದ್ಧ ವೇತನ ಮುಂಬಡ್ತಿ, 15 ವರ್ಷಗಳ ಸ್ವಯಂಚಾಲಿತ ವೇತನ ಮುಂಬಡ್ತಿ, 20-25 ವರ್ಷಗಳ ಹೆಚ್ಚುವರಿ ವೇತನ ಬಡ್ತಿ, ಪಿಂಚಣಿ, ಕುಟುಂಬ ಪಿಂಚಣಿ, ಗ್ರಾಚ್ಯುಯಿಟಿ (ನಿವೃತ್ತಿ ಉಪದಾನ) / ಡಿ.ಸಿ.ಆರ್.ಜಿ (ಮರಣ ಉಪದಾನ), ಪರಿವರ್ತಿತ ಪಿಂಚಣಿ ಸೌಲಭ್ಯಗಳನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡಲಾಗುತ್ತಿದೆ.<br><br>ಮೇಲಿನ ಎಲ್ಲಾ ಸೌಲಭ್ಯಗಳನ್ನು ಅನುದಾನಿತ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರಿಗೂ ನೀಡಲಾಗಿದೆ. ಮಹಿಳಾ ಸಿಬ್ಬಂದಿಗಳಿಗೆ ಹೆರಿಗೆ ರಜೆ ಸೌಲಭ್ಯವನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಅನುದಾನಿತ ಐಟಿಐ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಸಂಹಿತೆಯನ್ನು ಪರಿಷ್ಕರಿಸದಿರಲು ಕಾರಣಗಳೇನು: | ಅನುದಾನ ಸಂಹಿತೆಯನ್ನು ಪರಿಷ್ಕರಿಸಲಾಗುತ್ತಿದೆ. |
| ಈ) | ಐಟಿಐ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ 6ನೇ ವೇತನ ಆಯೋಗದ ಆದೇಶದನ್ವಯ ಇದುವರೆಗೆ ವೇತನ ಪಾವತಿಸದಿರಲು ಕಾರಣವೇನು: (ವಿವರ ನೀಡುವುದು) | ಅನುದಾನಿತ ಐ.ಟಿ.ಐ ಕಾಲೇಜುಗಳ ಸಿಬ್ಬಂದಿ ವರ್ಗದವರಿಗೆ ದಿನಾಂಕ:24/09/2018 ಸರ್ಕಾರದ ಆದೇಶದಲ್ಲಿ 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ವಿಸ್ತರಿಸಿ ಆದೇಶಿಸಲಾಗಿದ್ದು, ಅದರಂತೆ ಆರ್ಥಿಕ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುವುದು. |
| ಉ) | ಯಾವ ಕಾಲಮಿತಿಯಲ್ಲಿ ಹೊಸ ವೇತನ ನೀಡಲಾಗುತ್ತದೆ? (ವಿವರ ನೀಡುವುದು) | |

**ಸಂಖ್ಯೆ: ಕೌಉಜೀಇ 89 ಕೈತಪ್ರ 2018**

(ಆರ್.ವಿ. ದೇಶಪಾಂಡೆ)
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು**
**ಜೀವನೋಪಾಯ ಸಚಿವರು**